**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 16/10/2024)**

**ಪಾಟೀ ಸವಾಲು :ಪ್ರತಿವಾದಿ ಪರ ಶ್ರೀ ಜೆ ಡಿ ಎನ್ ವಕೀಲರಿಂದ,**

ನಾನು ಖಾಯಂ ಆಗಿ ತಲಾಂದ ಗ್ರಾಮದ ಮನೆ ನಂಬರ 174 ರಲ್ಲಿ ವಾಸ ಮಾಡುತ್ತೇನೆ. ನಾನು ಮೆಕ್ಯಾನಿಕಲ್ ಇಂಜಿನೀಯರ್ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಸುಮಾರು 2–3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ತಿಂಗಳಿಗೆ ಒಂದೆರಡು ಬಾರಿ ಬೆಂಗಳೂರಿನಿಂದ ಊರಿಗೆ ಬರುತ್ತೇನೆ. ಈ ದಾವೆಯ ವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನಾನು ಈ ದಾವೆಯಲ್ಲಿ ಫೆಬ್ರುವರಿ 2021 ರಲ್ಲಿ ಹಾಜರಾಗಿರುತ್ತೇನೆ.

2. ಈ ಮೇಲೆ ಹೇಳಿದ ಮನೆ ನಂಬರ 174 ತಲಾಂದ ಗ್ರಾಮದ ಸರ್ವೇ ನಂಬರ 6/1ಬ ದಲ್ಲಿ ಬರುತ್ತದೆ. ಸ್ವದ್ರಿ ಸರ್ವೇ ನಂಬರನಲ್ಲಿ ಒಟ್ಟು 17 ಗುಂಟೆ ಕ್ಷೇತ್ರ ಇರುತ್ತದೆ. ಸ್ವದ್ರಿ ಸರ್ವೇ ನಂಬರನ ಜಮೀನು ಮೂಲತಃ ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕ ರವರಿಗೆ ಸೇರಿದ್ದಾಗಿತ್ತು. ಸ್ವದ್ರಿಯವರಿಗೆ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸ್ವದ್ರಿ ಜಮೀನಿನ ಮೇಲೆ ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕರವರು ಜನತಾ ಕೋ ಅಪರೇಟಿವ್ ಸೊಸೈಟಿಯಲ್ಲಿ ಸಾಲ ಮಾಡಿದ್ದು ಅದನ್ನು ತೀರಿಸದೇ ಇದ್ದರಿಂದ ನ್ಯಾಯಾಲಯದಲ್ಲಿ ಸ್ವದ್ರಿ ಜಮೀನು ಹರಾಜಿಗೆ ಬಂದಿದ್ದು ಅದನ್ನು ನನ್ನ ತಂದೆಯವರು ಖರೀದಿ ಮಾಡಿರುತ್ತಾರೆ. ಸಾಲವನ್ನು ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕರವರು ಇಬ್ಬರು ಪಡೆದುಕೊಂಡಿದ್ದರು. ಸ್ವದ್ರಿ ಸಾಲಕ್ಕೆ ಯಾರು ಜಾಮೀನುದಾರರಿದ್ದರು ಎಂದು ನನಗೆ ನೆನಪಿಲ್ಲ. ಸಾಲವನ್ನು ಜನತಾ ಕೋ ಅಪರೇಟಿವ್ ಸೊಸೈಟಿಯಲ್ಲಿ ಶನಿಯಾರ ಗೋವಿಂದಪ್ಪ ನಾಯ್ಕರವರು ಮಾತ್ರ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸ್ವದ್ರಿ ಸಾಲಕ್ಕೆ ಪ್ರತಿವಾದಿ ಅನಂತ ಗೋವಿಂದಪ್ಪ ನಾಯ್ಕ, ಆನಂದ ಸೋಮಯ್ಯ ನಾಯ್ಕ ಮತ್ತು ಶಂಕರ ದುರ್ಗಪ್ಪ ನಾಯ್ಕರವರು ಜಾಮೀನುದಾರರಾಗಿದ್ದರು ಎಂದರೆ ಗೊತ್ತಿಲ್ಲ. ಸರ್ವೇ ನಂಬರ 6/1ಬ ರಲ್ಲಿರುವ ಜಮೀನು ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕರವರಿಗೆ ಅವರ ಕುಟುಂಬದಿಂದ ಬಂದ ಆಸ್ತಿಯಾಗಿದ್ದು ಸಾಮಾಯಿಕ ನಾತೆಯಲ್ಲಿತ್ತು ಎಂದರೆ ಸಾಕ್ಷಿಯು ಅವರಿಬ್ಬರೂ ಸಾಲ ಮಾಡಿದ್ದರು ಎಂದು ಉತ್ತರಿಸಿರುತ್ತಾರೆ. ಸ್ವದ್ರಿ ಸಾಲವನ್ನು ಶನಿಯಾರ ಗೋವಿಂದಪ್ಪ ನಾಯ್ಕರವರು ಮಾತ್ರ ಪಡೆದುಕೊಂಡಿದ್ದು ಅದಕ್ಕೆ ಪ್ರತಿವಾದಿ

ಅನಂತ ಗೋವಿಂದಪ್ಪ ನಾಯ್ಕರವರು ಜಾಮೀನುದಾರರಾಗಿದ್ದು ಮಾತ್ರ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಇಬ್ಬರೂ ಸಾಲ ಪಡೆದುಕೊಂಡಿರುತ್ತಾರೆ.

3. ಈ ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ಹೊನ್ನಾವರದ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಮಲ್ಜಾರಿ ಅರ್ಜಿ ದಾಖಲಾಗಿತ್ತು. ಸದ್ರಿ ಅರ್ಜಿಯಲ್ಲಿ ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಪ್ರತಿವಾದಿ ಅನಂತ ಗೋವಿಂದಪ್ಪ ನಾಯ್ಕ ಹಾಗೂ ಆನಂದ ಸೋಮಯ್ಯ ನಾಯ್ಕ ಮತ್ತು ಶಂಕರ ದುರ್ಗಪ್ಪ ನಾಯ್ಕರವರಿಗೆ ನೋಟಿಸು ಆಗಿತ್ತು ಎಂದರ ಸರಿ. ಸದ್ರಿ ಅಮಲ್ಜಾರಿ ಅರ್ಜಿಯಲ್ಲಿ ನನ್ನ ತಂದೆಯವರು ನ್ಯಾಯಾಲಯಕ್ಕೆ ಹಾಜರಾಗಿದ್ದರು. ಸದ್ರಿ ಅಮಲ್ಜಾರಿ ಅರ್ಜಿಗೆ ಸಂಬಂಧಿಸಿದಂತೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ, ಆದರೆ ನನ್ನ ತಂದೆಯವರು ಹೇಳಿದ ವಿಚಾರಗಳು ಗೊತ್ತು. ನಾನು ಸದ್ರಿ ಅಮಲ್ಜಾರಿ ಅರ್ಜಿಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಸದ್ರಿ ಅಮಲ್ಜಾರಿ ಅರ್ಜಿಯ ಸಂಖ್ಯೆ 101/2004 ಎಂದರೆ ಸರಿ. ಸದ್ರಿ ಅಮಲ್ಜಾರಿಯಲ್ಲಿ ಆದಂತಹ ಸೇಲ್ ವಾರಂಟ್ ಮತ್ತು ಡಿಕ್ರಿ ಸರ್ಟಿಫಿಕೇಟ್ ನ್ನು ನೋಡಿರುತ್ತೇನೆ. ಸದ್ರಿ ಅಮಲ್ಜಾರಿ ಅರ್ಜಿಯಲ್ಲಿ ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕರವರ ಆಸ್ತಿಗೆ ಸೇಲ್ ಪ್ರೊಕ್ಲಾಮೇಶನ್ ಮತ್ತು ಜಪ್ತಿ ವಾರಂಟ್ ಆಗಿತ್ತು. ಸದ್ರಿ ಸೇಲ್ ಪ್ರೊಕ್ಲಾಮೇಶನ್ ಮತ್ತು ಜಪ್ತಿ ವಾರಂಟ್ ನ್ನು ನಾನು ಓದಿರುತ್ತೇನೆ. ಸದ್ರಿ ಸೇಲ್ ಪ್ರೊಕ್ಲಾಮೇಶನ್ ನಲ್ಲಿ ಶನಿಯಾರ ಗೋವಿಂದಪ್ಪ ನಾಯ್ಕರವರ ಹೆಸರು ಮಾತ್ರ ಇರುತ್ತದೆ ಎಂದರೆ ಸರಿ. ಸದ್ರಿ ಸೇಲ್ ಪ್ರೊಕ್ಲಾಮೇಶನ್ ನನ್ನು ಪ್ರಶ್ನಿಸಿರುವುದಿಲ್ಲ.

4. ನಿಪಿ–2 ಡಿಕ್ರಿ ಸರ್ಟಿಫಿಕೇಟ್ ನ ಮೂರನೇ ಪುಟದಲ್ಲಿ ಪ್ರತಿವಾದಿ ಅನಂತ ಗೋವಿಂದಪ್ಪ ನಾಯ್ಕ ರವರ ಹೆಸರು ಬರೆದಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಎರಡನೇ ಪುಟದಲ್ಲಿ ಅವರ ಹೆಸರು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಈ ಮೇಲೆ ಹೇಳಿದ ಸರ್ವೇ ನಂಬರ 6/1ಬ ದಲ್ಲಿರುವ 17 ಗುಂಟೆ ಜಮೀನು ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕರವರ ಜಂಟಿ ಆಸ್ತಿ ಎಂದರೆ ಸರಿಯಲ್ಲ. ಸದ್ರಿ ಜಮೀನಿನಲ್ಲಿ ಅವರಿಬ್ಬರಿಗೆ ಎಷ್ಟೆಷ್ಟು ಪಾಲು ಇದೆ ಎಂದು ನನಗೆ ಗೊತ್ತಿಲ್ಲ. ನಾನು ಬಿ ಇ ಮೆಕ್ಯಾನಿಕ್ ಪದವಿಧರನಾಗಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಸರ್ವೇ ನಂಬರ 6/1ಬ ರ ಒಂದು ಕೈಬರಹದ ಪಹಣಿ ಪತ್ರಿಕೆಯನ್ನು ತೋರಿಸಿ ಅದರಲ್ಲಿ ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು

ಅನಂತ ಗೋವಿಂದಪ್ಪ ನಾಯ್ಕರವರ ಜಂಟಿ ಆಸ್ತಿ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಸದ್ರಿ ಆಸ್ತಿಯು ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಅನಂತ ಗೋವಿಂದಪ್ಪ ನಾಯ್ಕರವರ ಜಂಟಿ ಆಸ್ತಿ ಎಂದು ಗೊತ್ತಿದ್ದರೂ ಸಹ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಈ ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ಹೊನ್ನಾವರ ನ್ಯಾಯಾಲಯದಲ್ಲಿ ಕಬ್ಜಾ ರಶೀದಿಯನ್ನು ನನ್ನ ತಂದೆಯವರಿಗೆ ನೀಡಿರಬಹುದು. ಅದು ನಿಮ್ಮ ಬಳಿ ಇರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನೋಡಿ ಹೇಳಬೇಕು ಎಂದು ಉತ್ತರಿಸಿರುತ್ತಾರೆ. ಆ ರೀತಿ ಕಬ್ಜಾ ರಶೀದಿಯನ್ನು ನ್ಯಾಯಾಲಯದಲ್ಲಿ ನಮಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ನಮಗೆ ಸದ್ರಿ ಜಮೀನಿನ ಕಬ್ಜಾವನ್ನು ನ್ಯಾಯಾಲಯದಿಂದ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಶನಿಯಾರ ಗೋವಿಂದಪ್ಪ ನಾಯ್ಕ ರವರ ಹಕ್ಕಿನ ಆಸ್ತಿ ಮಾತ್ರ ಮಾರಾಟ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸೇಲ್ ಸರ್ಟಿಫಿಕೇಟ್ ನ್ನು ಸಹ ಶನಿಯಾರ ಗೋವಿಂದಪ್ಪ ನಾಯ್ಕ ರವರ ಹಕ್ಕಿನ ಆಸ್ತಿ ಮಾತ್ರ ನೀಡಲಾಗಿರುತ್ತದೆ ಎಂದರ ಸರಿಯಲ್ಲ. ನಾವು ತಲಾಂದ ಗ್ರಾಮದ ಸರ್ವೆ ನಂಬರ 6/1ಬ ದ ಸಂಪೂರ್ಣ ಕ್ಷೇತ್ರದಲ್ಲಿ ಕಬ್ಜಾದಲ್ಲಿರುವುದಿಲ್ಲ ಎಂದರೆ ಸಾಕ್ಷಿಯು ಶನಿಯಾರ ಗೋವಿಂದಪ್ಪ ನಾಯ್ಕ ರವರು ಅವರಿಗೆ ಸೇರಿದ 14 ಗುಂಟೆ ಕ್ಷೇತ್ರವನ್ನು ನಮಗೆ ಬಿಟ್ಟುಕೊಟ್ಟಿರುತ್ತಾರೆ, ಆದರೆ ಪ್ರತಿವಾದಿ ಅನಂತ ಗೋವಿಂದಪ್ಪ ನಾಯ್ಕ ರವರು 4 ಗುಂಟೆ ಕ್ಷೇತ್ರದ ಕಬ್ಜಾ ಬಿಟ್ಟುಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದ್ರಿ ಸರ್ವೆ ನಂಬರ ಎಂಟುವರೆ ಗುಂಟೆ ಕ್ಷೇತ್ರದಲ್ಲಿ ಪ್ರತಿವಾದಿಯವರು ಕಬ್ಜಾದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಎಂಟುವರೆ ಗುಂಟೆ ಕ್ಷೇತ್ರದಲ್ಲಿ ಪ್ರತಿವಾದಿಯವರ ವಾಸ್ತವ್ಯದ ಮನೆ ಇರುತ್ತದೆ ಎಂದರೆ ಹೌದು. ಸದ್ರಿ ಮನೆಯು ಅಲ್ಲಿ 17 ವರ್ಷಗಳಿಂದ ಇರುತ್ತದೆ. ಸದ್ರಿ ಸ್ಥಳದಲ್ಲಿ ಪ್ರತಿವಾದಿಗೆ ಸೇರಿದ ಒಂದು ಬಾವಿ ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಯು ನಮಗೆ ಬಿಟ್ಟುಕೊಡದ 4 ಗುಂಟೆ ಕ್ಷೇತ್ರದಲ್ಲಿ ಕಂಪೌಂಡ ಹಾಕಿದ್ದು ಇತ್ತೀಚಿಗೆ ಬಾವಿ ತೆಗೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಈ ದಾವೆಗೋಸ್ಕರ ಪ್ರತಿವಾದಿಯವರಿಗೆ ಸದ್ರಿ ಸರ್ವೆ ನಂಬರನಲ್ಲಿ ಎಂಟುವರೆ ಗುಂಟೆ ಕ್ಷೇತ್ರ ಸೇರಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಎಂಟುವರೆ ಗುಂಟೆ ಕ್ಷೇತ್ರದಲ್ಲಿ ಪ್ರತಿವಾದಿಗೆ ಸೇರಿದ ಮನೆ, ಕಂಪೌಂಡ ಮತ್ತು ಬಾವಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 6/1ಬ ದ 17 ಗುಂಟೆ ಕ್ಷೇತ್ರದಲ್ಲಿ ಶನಿಯಾರ ಗೋವಿಂದಪ್ಪ

ನಾಯ್ಕು ರವರಿಗೆ ಎಂಟುವರೆ ಗುಂಟೆ ಕ್ಷೇತ್ರ ಮತ್ತು ಪ್ರತಿವಾದಿಗೆ ಎಂಟುವರೆ ಗುಂಟೆ ಕ್ಷೇತ್ರ ಸೇರಿರುತ್ತದೆ ಎಂದರೆ ಸರಿಯಲ್ಲ. ಪೂರ್ತಿ ಕ್ಷೇತ್ರ ನಮ್ಮದಾಗಿರುತ್ತದೆ. ಸದ್ರಿ ಪೂರ್ತಿ ಕ್ಷೇತ್ರದ ಕಬ್ಜಾ ರಶೀದಿಯನ್ನು ನ್ಯಾಯಾಲಯದಲ್ಲಿ ನಮಗೆ ನೀಡಿರುತ್ತಾರೆ. ಕಬ್ಜಾ ರಶೀದಿಯನ್ನು ನೀಡುವಾಗ ಯಾರು ಯಾರು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸಾಕ್ಷಿಯು ಕಬ್ಜಾ ರಶೀದಿಯನ್ನು ನನ್ನ ತಂದೆಯವರಿಗೆ ನೀಡಿರುತ್ತಾರೆ ನಾನು ಹಾಜರಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಆ ಬಗ್ಗೆ ನಾನು ನನ್ನ ತಂದೆಯವರನ್ನು ವಿಚಾರಿಸಿರುವುದಿಲ್ಲ. ಅದೇ ರೀತಿ ನನ್ನ ತಾಯಿಯವರನ್ನು ಸಹ ಕೇಳಿರವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**